ಯೋಜನೆಯಡಿಯಲ್ಲಿ 18 ಸಾವಿರ ರೂಪಾಯಿಗಳನ್ನು ಕೇಂದ್ರದಿಂದ ಕೊಡುತ್ತೇವೆ. 15 ಸಾವಿರ ರೂಪಾಯಿ ಸಾಲದ ಮುಖಾಂತರ ಕೊಡಬೇಕು. 3 ಸಾವಿರ ಫಲಾನುಭವಿಗಳು ಭರಿಸಬೇಕು. ಈ ಯೋಜನೆ ಕೆಳಗೆ ನೀವು ಪ್ರಸ್ತಾವನೆ ಕಳುಹಿಸಿದ್ದು ಇತ್ತು ಎಂದರೆ ಅದು ನನಗೆ ಗೊತ್ತಿಲ್ಲ. ಈ ವರ್ಷವೇ ತಮಗೆ ಮಂಜೂರಾತಿ ಮಾಡಿಕೊಡುತ್ತೇನೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಬಿಕ್ಷಾಟನೆ ನಿಷೇಧ ಕುರಿತು

513 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಿಕ್ಷಾಟನೆ ನಿಷೇಧ ಕಾಯ್ದೆ ಯಾವಾಗಿನಿಂದ ಜಾರಿಗೆ ಬಂದಿದೆ?

ಆ) ಕಾಯ್ದೆ ಜಾರಿಗೆ ಬಂದ ನಂತರ ರಸ್ತೆಯಲ್ಲಿ ಈ ಬಿಕ್ಷುಕರು ಇಲ್ಲವೆ?

ಇ) ಬೆಂಗಳೂರಿನ ಶನಿಮಹಾತ್ಮ ದೇವಸ್ಥಾನ, ವಿಜಯನಗರ, ಸಜ್ಜನರಾವ್ ವೃತ್ತ, ರಾಜ್ಯದ ಇತರ ನಗರಗಳಲ್ಲಿ ಭಿಕ್ಷಟನೆ ನಡೆಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಈ) ರಾಜ್ಯದಲ್ಲಿ ಭಿಕ್ಷುಕರಿಗೆ ಮಾಡಿರುವ ಪರ್ಯಾಯ ವ್ಯವಸ್ಥೆಗಳೇನು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಭಿಕ್ಷಾಟನೆ ನಿಷೇಧ ಕಾಯಿದೆ ದಿನಾಂಕ : 6-6-1975 ರಿಂದ ಜಾರಿಗೆ ಬಂದಿದೆ.

ಆ) ಭಿಕ್ಷುಕರು ಇದ್ದಾರೆ. ಕಾಯಿದೆ ಜಾರಿಗೆ ಬಂದ ನಂತರ ಭಿಕ್ಷುಕರನ್ನು ಪೋಲೀಸರು ಸದರಿ ಕಾಯಿದೆಯಲ್ಲಿ ತಮಗೆ ದತ್ತವಾದ ಅಧಿಕಾರವನ್ನು ಉಪಯೋಗಿಸಿ ಭಿಕ್ಷುಕರನ್ನು ಬಂಧಿಸಿ ನಿರಾಶ್ರಿತರ ಪರಿಹಾರ ಕೇಂದ್ರಗಳಿಗೆ ಕಳುಹಿಸುತ್ತಾರೆ. ಆದರೂ ಕೂಡ ಕೆಲಮೊಮ್ಮೆ ರಸ್ತೆಯಲ್ಲಿ ಭಿಕ್ಷುಕರು ಇರುತ್ತಾರೆ.

ಇ) ಬಂದಿದೆ.

ಈ) ಬಂಧಿಸಿದ ಭಿಕ್ಷುಕರನ್ನು ನ್ಯಾಯಾಧೀಶರ ಬಳಿ ಹಾಜರುಪಡಿಸಿ ಅವರ ಆದೇಶದ ಅವಧಿಯವರೆಗೆ ಭಿಕ್ಷುಕರನ್ನು ಸ್ಥಳೀಯ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಇರಿಸಿಕೊಂಡು ಬಂಧನದ ಅವಧಿಯಲ್ಲಿ ಅವರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡುವ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಕೆ. ಜಯರಾಮ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಭಿಕ್ಷಾಟನೆ ನಿಷೇಧದ ಕಾಯಿದೆ ಬಗ್ಗೆ ಕೇಳಿದ್ದೇನೆ. ಈ ಭಿಕ್ಷಾಟನೆ ನಿಷೇಧ ಕಾಯಿದೆ ಇಡೀ ರಾಜ್ಯದಲ್ಲಿ ಇದೆಯೇ ಅಥವಾ ಕೆಲವು ಜಿಲ್ಲೆಗಳಿಗೆ ಮಾತ್ರ ಸೀಮಿತ ಮಾಡಿ ಕೊಂಡಿದ್ದೀರಾ? ಆ ಭಿಕ್ಷುಕರಿಗೆ ಶಿಬಿರಗಳು ಎಲ್ಲೆಲ್ಲಿ ಮಾಡಿಕೊಂಡಿದ್ದೀರಾ? ಹಾಗೂ ಈಗ ಭಿಕ್ಷಾಟನೆ ಏತಕ್ಕೋಸ್ಕರ ಮಾಡಿದೆ ಮತ್ತು ಈ ಭಿಕ್ಷಾಟನೆ ನಿಷೇಧ ಕಾಯಿದೆ ನಂತರ ಇದರ ಬಗ್ಗೆ ಏನಾದರೂ ಸಮೀಕ್ಷೆ ಮಾಡಿದ್ದೀರಾ? ನಿಜವಾಗಿ ಭಿಕ್ಷುಕರನ್ನು ಶಿಬಿರದಲ್ಲಿ

ಸೇರಿಸಿಕೊಂಡು ನಂತರ ಅವರಿಗೆ ಕುಟುಂಬಕ್ಕೆ ಜೀವನ ನಿರ್ವಹಣೆ ಮಾಡುವಂತಹ ಕಾರ್ಯಕ್ರಮ ಏನಾದರೂ ಸರ್ಕಾರ ಹಮ್ಮಿಕೊಂಡಿದೆಯೇ? ಇದ್ದರೆ ಅದು ಎಷ್ಟು ಜನರಿಗೆ ಮಾಡಿದ್ದೀರೆಂದು ಹೇಳಬೇಕು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಈ ಭಿಕ್ಷುಕರ ಕಾಯಿದೆಯನ್ನು ಕೇವಲ 10 ನಗರಗಳಿಗೆ ಸೀಮಿತವಾಗಿ ಜಾರಿಯಲ್ಲಿ ಮಾಡಲಾಗಿದೆ. ಅವುಗಳು ಬೆಂಗಳೂರು ಮಹಾನಗರ, ಮೈಸೂರು ಮಹಾನಗರ, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ ಗುಲ್ಬರ್ಗಾ, ಬಳ್ಳಾರಿ, ದಾವಣಗೆರೆ, ಶಿವಮೊಗ್ಗ ಮತ್ತು ಬಿಜಾಪುರ. ಈ ಹತ್ತು ನಗರಗಳಿಗೆ ಸೀಮಿತವಾಗಿ ಮಾತ್ರ ನಾವು ಈ ಭಿಕ್ಷಾಟನೆ ಕಾಯಿದೆಯು ಜಾರಿಯಲ್ಲಿದೆ. ಈಗ ಸರ್ಕಾರ ಇಡೀ ರಾಜ್ಯದಲ್ಲಿ ಈ ಕಾಯಿದೆಯನ್ನು ಜಾರಿಗೆ ತರಬೇಕೆಂದು ಪರ್ಯಾಲೋಚನೆ ಮಾಡುತ್ತಿದೆ.

11.20 ಎ.ಎಂ.

ಇದಕ್ಕೆ ಬೇಕಾದ ಮೂಲಭೂತ ಅಗತ್ಯಗಳ ಬಗ್ಗೆ ಈಗಾಗಲೇ ಎಲ್ಲಾ ಕಡೆ ಜಿಲ್ಲಾಧಿಕಾರಿಗಳಿಗೆ ಬರೆದಿದ್ದೇವೆ. ಇದು ಇಡೀ ರಾಜ್ಯದಾದ್ಯಂತ ಆದಾಗ, ಇದನ್ನು ಸಂಪೂರ್ಣವಾಗಿ ಜಾರಿಗೊಳಿಸುವುದಕ್ಕೆ ಆಗುತ್ತದೆಯೇ ಎಂಬ ದೃಷ್ಟಿಯಿಂದ ಹೀಗೆ ಮಾಡಿದ್ದೇನೆ. ಈ ಭಿಕ್ಷಾಟನೆಯ ಸಂಖ್ಯಾಬಲವನ್ನು ಸಮೀಕ್ಷೆಯ ಮೂಲಕ ಮಾಡುವುದು ಬಹಳ ಕಷ್ಟ, ಇದೆ. ಏತಕ್ಕೆಂದರೆ ಈ ಭಿಕ್ಷಾಟನೆ ಎನ್ನತಕ್ಕಂಥದ್ದು ಇದು ಇಡೀ ರಾಷ್ಟ್ರ ವ್ಯಾಪಿಯಾಗಿದೆ. ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬರುತ್ತಾರೆ, ತಮಿಳುನಾಡಿಗೆ ಬರುತ್ತಾರೆ. ಅವರು ವಲಸೆ ಬರತಕ್ಕಂಥ ಒಂದು ಸ್ಥಿತಿಯಲ್ಲಿರತಕ್ಕಂಥವರನ್ನು ನಾವು ಸಮೀಕ್ಷೆ ಮಾಡುವುದು ತುಂಬಾ ಕಷ್ಟ. ಅವರಿಗೆ ಸ್ಥಳವೇ ನಿಗಧಿಯಾಗಿಲ್ಲ. ಅವರು ಎಲ್ಲಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುವುದು ಈ ಭಿಕ್ಷಾಟನೆಯ ವೃತ್ತಿ. ಆದ್ದರಿಂದ ಇದನ್ನು ಸಮೀಕ್ಷೆ ಮಾಡಲು ತುಂಬಾ ಕಷ್ಟ, ಇದು ಸಾಧ್ಯವೂ ಆಗುತ್ತಾ ಇಲ್ಲ. ಆದ್ದರಿಂದ ಇದನ್ನು ರಾಜ್ಯದಾದ್ಯಂತ ಮಾಡುವಾಗ ಈ ಭಿಕ್ಷಾಟನೆಗೆ ಒಂದು ಮೂಲಭೂತವಾದ ಸೌಕರ್ಯವನ್ನು ಒದಗಿಸಬೇಕಾದಂತ ವ್ಯವಸ್ಥೆಯನ್ನು ಮಾಡಬೇಕೆಂದು ಇದ್ದೇವೆ. ಈಗ ಇರತಕ್ಕಂತಹ ಕಾಯಿದೆಯ ಅಡಿಯಲ್ಲಿ ಪೊಲೀಸಿನವರು ಅರೆಸ್ಟ್ ಮಾಡಿ ತಂದು ನಿರಾಶ್ರಿತರ ಕ್ಷೇತ್ರಗಳಲ್ಲಿ ಬಿಟ್ಟಾಗ ಅವರಿಗೆ ನಾವು ಕೆಲವು ಟ್ರೈನಿಂಗನ್ನು ಕೊಡುವಂತಹ ವ್ಯವಸ್ಥೆ ಇದೆ. ಅವರಿಗೆ ಕೈಗಾರಿಕೆಗಳಲ್ಲಿ ಟ್ರೈನಿಂಗ್ ಕೊಡತಕ್ಕಂತಹ ವ್ಯವಸ್ಥೆಯನ್ನು ಚಾಪೆ, ನೇಯ್ಗೆ ಮಾಡತಕ್ಕದ್ದನ್ನು ಚಪ್ಪಲಿ ಹೂಲಿಯತಕ್ಕಂಥದನ್ನು ವ್ಯವಸಾಯ ಮಾಡತಕ್ಕಾಂಥದನ್ನು ಇದೆಲ್ಲಾ ಟ್ರೈನಿಂಗ್ ಕೊಡುತ್ತಿದ್ದೇವೆ.

ಶ್ರೀ ಕೆ. ಜಯರಾಮಶೆಟ್ಟಿ : ಇದುವರೆಗೆ ನಿಮ್ಮ ನಿಷೇಧ ಕಾಯಿದೆಯ ಬಂದ ನಂತರ ಎಷ್ಟು ಜನಕ್ಕೆ ಮಾಡಿಕೊಂಡಿದ್ದೀರಾ? ಅದರ ಜತೆಗೆ ಈಗ ಭಿಕ್ಷಾಟನೆಗೆ ಇಳಿಸುವಂತಹ ಒದು ವಂಚಕರ ಜಾಲ ಬೆಂಗಳೂರು ಮತ್ತು ದೊಡ್ಡ ದೊಡ್ಡ ನಗರಪಾಲಿಕೆಯಲ್ಲಿ ಇದೆ. ಇದು ತಮ್ಮ ಗಮನಕ್ಕೆ ಬಂದಿಲ್ಲಮೇ? ಅಸಾಹಯಕ ಮಕ್ಕಳನ್ನು ಕರೆದುಕೊಂಡು ಹೋಗುವಂಥಾದ್ದು ಅವರನ್ನು ಈ ಭಿಕ್ಷಾಟನೆಗೆ ಇಳಿಸುವಂಥದ್ದು, ಅದೂ ಅವರನ್ನು ಬೇರೆ ಬೇರೆ ಬಸ್‌ನಿಲ್ದಾಣ, ರೈಲು ನಿಲ್ದಾಣ, ಸಂತೆ ಮೈದಾನ ಇಂತಹ ಪ್ರದೇಶಗಳಲ್ಲಿ

ಅವರನ್ನು ಉಪಯೋಗಿಸಿಕೊಂಡು ವ್ಯವಸ್ಥಿತವಾದ ಜಾಲ ಮಾಡಿಕೊಳ್ಳುವುದು ಇದೆ. ಇವರನ್ನು ಬೇರೆ ಬೇರೆ ಕಡೆಗೆ ವೈಶ್ಯಾವಾಟಿಕೆಗೆ ಸಣ್ಣ ಸಣ್ಣ ಮಕ್ಕಳನ್ನು ತೆಗೆದುಕೊಂಡು ಬೇರೆ ಬೇರೆ ಕಡೆಗೆ ವ್ಯವಸ್ಥೆ ಮಾಡುವಂಥದ್ದು ಇದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಈಗಾಗಲೇ ಸಂಯುಕ್ತ ಕರ್ನಾಟಕದಲ್ಲಿ 27ಕ್ಕೆ ಒಂದು ಲೇಖನವನ್ನು ಬರೆದಿದ್ದಾರೆ. ತಾವು ಸರ್ಕಾರ ಈ ಬಗ್ಗೆ ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಈ ಭಿಕ್ಷಾಟನೆ ನಾನಾ ರೂಪದಲ್ಲಿದೆ. ಸರ್ಕಾರದ ಗಮನಕ್ಕೂ ಕೂಡ ಇದು ಬಂದಿದೆ. ರೈಲ್ವೆ ನಿಲ್ದಾಣದಲ್ಲಿದೆ, ದಾರಿಯಲ್ಲಿ ಭಿಕ್ಷಾಟನೆಯನ್ನೇ ಒಂದು ವೃತ್ತಿಯನ್ನಾಗಿ ಮಾಡಿಕೊಂಡಿರುವ ಕೆಲವು ದುಷ್ಟಶಕ್ತಿಗಳೂ ಕೂಡ ಇದೆ. ಇದೆಲ್ಲವನ್ನು ನಾವು ಒಂದೇ ಹಂತದಲ್ಲಿ ನಿರ್ಮೂಲನೆ ಮಾಡುವುದಕ್ಕೆ ಸಾಧ್ಯವಿಲ್ಲ. ಇದು ಪುರಾತನ ಕಾಲದಿಂದ ಬಂದಿರತಕ್ಕಂತಹ ಒಂದು ದುಷ್ಟಟ. ಈ ದೇಶದಲ್ಲಿ ಇದು ಒಂದು ದುರಂತ. ಇದನ್ನು ನಿರ್ಮೂಲನೆ ಮಾಡಲು ನಾವು ಕೇವಲ ಪೊಲೀಸರ ನೆರವಿನಿಂದ ಮಾಡುವುದು ಕಷ್ಟವಾಗುತ್ತದೆ. ನಾವು ಪರಿಶೀಲಿಸುತ್ತಾ ಇರತಕ್ಕಂಥ ಕಾಯಿದೆ ಜಾರಿಗೆ ಬಂದರೆ ಅರೆಸ್ಟ್ ಮಾಡುವಂತಹ ವಿಧಾನದಲ್ಲಿ ಕೂಡ ಕೆಲವೊಂದು ಪರಿವರ್ತನೆಯನ್ನು ಮಾಡಬೇಕೂಂತ ಇದ್ದೇವೆ. ಬರೀ ಪೊಲೀಸಿನವರೇ ಅಲ್ಲ, ಮಹಾನಗರ ಪಾಲಿಕೆಯವರು, ಚಿಕ್ಕ ಚಿಕ್ಕ ಮುನಿಸಿಪಾಲಿಟಿಯವರು ಕೂಡ ಅರೆಸ್ಟ್ ಮಾಡುವಂತಹ ವ್ಯವಸ್ಥೆ ಇದ್ದರೆ, ಆಗ ಇಡೀ ರಾಜ್ಯದಲ್ಲಿ ಕಾನೂನನ್ನು ಸುಗಮವಾಗಿ ಮಾಡಬಹುದು ಎಂದು ದೃಷ್ಟಿಯಿಂದ ಅಂಥ ಕಾಯಿದೆಯನ್ನು ತರುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೆ. ಜಯರಾಮಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಅವರು ನಮಗೆ ನಿರ್ದಿಷ್ಟವಾದ ಉತ್ತರವನ್ನು ಕೊಡಲಿಲ್ಲ. ಬದಲಿ ವ್ಯವಸ್ಥೆಯನ್ನು ಏನು ಮಾಡಿದ್ದೀರಿ? ಅದರ ಬಗ್ಗೆ ನನಗೆ ಉತ್ತರವನ್ನು ಕೊಡಿ. ನೀವು ಹಾಗೆ ಮಾಡಿದ್ದೇವೆ, ಹೀಗೆ ಮಾಡಿದ್ದೇವೆ ಎಂಬುದು ಒಟ್ಟು ಉತ್ತರವಲ್ಲ. ಇಷ್ಟರವರೆಗೆ ನೀವು ಏನು ಮಾಡಿಕೊಂಡಿದ್ದೀರಿ? ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ? ಎಷ್ಟು ಜನರು ಅರೆಸ್ಟ್ ಮಾಡಿ ಅವರಿಗೆ ಬದಲಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದೀರಿ? ನಿಮ್ಮಲ್ಲಿ ಅಂಕಿಅಂಶಗಳು ಇದೆಯೇ? ಎಷ್ಟು ವಂಚಕರ ಜಾಲವನ್ನು ಹಿಡಿದಿದ್ದೀರಿ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಈಗಾಗಲೇ ನಾನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇನೆ. ಬೆಂಗಳೂರು ಮಹಾನಗರಪಾಲಿಕೆಯಲ್ಲಿ 350 ಜನ ನಿರಾಶ್ರಿತರಿದ್ದಾರೆ. ಮೈಸೂರಿನಲ್ಲಿ 62 ಜನ ಇದ್ದಾರೆ. ಈ ಅಂಕಿಅಂಶಗಳ ಬಗ್ಗೆ ಸದಸ್ಯರಿಗೆ ಒದಗಿಸಲಾಗಿದೆ ಮತ್ತು ಬೇಕಾದರೆ ಇನ್ನೊಂದು ಸಲ ಹೇಳುತ್ತೇನೆ. ಮಂಗಳೂರು ಮಹಾನಗರಪಾಲಿಕೆಯಲ್ಲಿ 21 ಜನ ಇದ್ದಾರೆ. ಹುಬ್ಬಳ್ಳಿ-ಧಾರವಾಡದಲ್ಲಿ 63 ಜನ ಇದ್ದಾರೆ, ಬೆಳಗಾವಿಯಲ್ಲಿ 48 ಜನ, ಗುಲ್ಬರ್ಗಾದಲ್ಲಿ 13 ಜನ, ಬಳ್ಳಾರಿಯಲ್ಲಿ 21 ಜನ ಇದ್ದಾರೆ. ದಾವಣಗೆರೆಯಲ್ಲಿ 8 ಜನ ಇದ್ದಾರೆ, ಶಿವಮೊಗ್ಗದಲ್ಲಿ 11 ಜನ ಇದ್ದಾರೆ. ಬಿಜಾಪುರದಲ್ಲಿ 15 ಜನ ಇದ್ದಾರೆ. ಹೀಗೆ ಅರೆಸ್ಟ್ ಆಗಿರತಕ್ಕಂತವರಿಗೆ ಕೂಡ ಅಲ್ಲಿ ಊಟ ಮತ್ತು ವಸತಿ ಜೊತೆಗೆ ಅವರಿಗೆ ಕೆಲವು ಕೆಲಸಗಳನ್ನು ಕೂಡ ಕೊಡುತ್ತಾ ಇದ್ದೇವೆ. ಅವರಿಗೆ ಕೆಲವು ಟ್ರೈನಿಂಗ್‌ನ್ನು ಸಹ ಕೊಡುತ್ತಾ ಇದ್ದೇವೆ.

ಅವರಿಗೆ ನೇಯ್ಗೆ, ಚಾಪೆ ಹೆಣೆಯುವುದನ್ನು, ಚಪ್ಪಲಿ ಮಾಡತಕ್ಕದನ್ನು ವ್ಯವಸಾಯ ಮಾಡತಕ್ಕದನ್ನು, ಇವೆಲ್ಲವನ್ನೂ ಕೂಡ ನಾವು ಕಲಿಸುತ್ತಿದ್ದೇವೆ.

ಶ್ರೀ ಕೆ. ಜಯರಾಮಶೆಟ್ಟಿ : ನೀವು ನಿರಾಶ್ರಿತರ ಶಿಬಿರದಿಂದಲೇ ಅವರನ್ನು ಭಿಕ್ಷಾಟನೆಗೆ ಕರೆದುಕೊಂಡು ಹೋಗುವಂಥ ಕಾರ್ಯಕ್ರಮ ಆಗುತ್ತಾ ಉಂಟು. ಬೆಳಿಗ್ಗೆ ಕಾಫಿ, ಊಟವಾದ ನಂತರ ಅವರನ್ನು ಕಳುಹಿಸುತ್ತಾರೆ ಮತ್ತು ಸಾಯಂಕಾಲವಾದ ನಂತರ ಅವರನ್ನು ವಾಪಸ್ಸು ಕರೆದುಕೊಂಡು ಬರುತ್ತಿದ್ದಾರೆ. ದಯವಿಟ್ಟು ಇದನ್ನು ತಾವು ಗಮನಕ್ಕೆ ತೆಗೆದುಕೊಳ್ಳಿ. ಮತ್ತೆ ಇದು ತಾವು ಕೊಟ್ಟ ಅಂಕಿ ಅಂಶ ಸರಿಯಲ್ಲ. ಬಹಳಷ್ಟು ದೊಡ್ಡ ಪ್ರಮಾಣದಲ್ಲಿದ್ದಾರೆ. ನಿಮ್ಮ ಈ ಇಲಾಖೆ ಇದಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾ ಇಲ್ಲ. ದಯವಿಟ್ಟು ಇದರ ಬಗ್ಗೆ ಸೀರಿಯಸ್ ಆಗಿ ತೆಗೆದುಕೊಳ್ಳಬೇಕು ಅಂತ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಮಾನ್ಯ ಸದಸ್ಯರು ನಿರ್ದಿಷ್ಟವಾದ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಭಿಕ್ಷುಕರಲ್ಲಿ ಎರಡು ತರಹದವರು ಇದ್ದಾರೆ. ಒಂದು ಅಶಕ್ತರಾಗಿ ಯಾರೂ ನೆರವಿಗೆ ಬರದೆ ಭಿಕ್ಷುಕರಾಗಿರುವವರು ಒಂದು ಗುಂಪು. ಎರಡನೆಯವರು ಧೃಡಕಾಯಕರಾಗಿದ್ದು ಸೋಮಾರಿತನದಿಂದ ನಾಟಕೀಯವಾಗಿ ಭಿಕ್ಷುಕರಾದವರು ಎರಡನೆಯ ಗುಂಪು. ದಯಮಾಡಿ ಎರಡನೇ ಗುಂಪಿನವರೇ ಜಾಸ್ತಿ ಇದ್ದಾರೆ. ಈಗ ನಮ್ಮ ಸಮಾಜದ ತಪ್ಪು ಇದೆ. ಏನೋ ದೊಡ್ಡತನಕ್ಕೆ ಬಂದು ಕೇಳಿದ ತಕ್ಷಣ ಭಿಕ್ಷೆ ಹಾಕುವುದು, ತೋರಿಸಿಕೊಳ್ಳುವುದು, ಈ ತರಹದ್ದೂ ಕೂಡ ಕೆಲವು ನಾವು ನೋಡುತ್ತಾ ಇದ್ದೇವೆ. ದಯಮಾಡಿ ಸರ್ಕಾರ ಈ ಎರಡನೇ ಗುಂಪಿನವರನ್ನು ಜಾಸ್ತಿ ಇರುವವರನ್ನು ಪರಿಗಣಿಸಿ ಅವರನ್ನೆಲ್ಲಾ ಹಿಡಿದು ಸರ್ಕಾರದ ಕಾರ್ಯಕ್ರಮಗಳಲ್ಲಿ ಈಗ ವೇಜಸ್ ಪಾರ್ಟ್‌ನಲ್ಲಿ ನಾವು ಕೆಲವು ಕೆಲಸವನ್ನು ಮಾಡುತ್ತೇವೆ, ಇಲಾಖೆಯ ವತಿಯಿಂದ ಇರಬಹುದು, ಯಾವುದೇ ಇಲಾಖೆಯಿಂದ ಇರಬಹುದು. ಅಂಥದಕ್ಕೆ ಅವರನ್ನೆಲ್ಲಾ ಹಚ್ಚಿದರೆ ಸ್ವಲ್ಪ ಅವರಿಗೆ ಸೋಮಾರಿತನವು ಹೋದ ಹಾಗೆ ಆಗುತ್ತದೆ. ಅವರಿಗೆ ಕೆಲಸವನ್ನು ಕೊಟ್ಟಂತೆ ಆಗುತ್ತದೆ. ಉಚಿತವಾಗಿ ಊಟ ಹಾಕುವುದು ಅವರನ್ನು ನೀಡಿ ಅವರ ಸಂಖ್ಯೆಯನ್ನು ಹೆಚ್ಚು ಮಾಡುವುದನ್ನು ಕಡಿಮೆ ಮಾಡಿದ ಹಾಗೆ ಆಗುತ್ತದೆ. ಅದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಭಿಕ್ಷಾಟನೆಯಲ್ಲಿ ನಕಲಿಯಾದರೂ ಕೂಡ ಅದು ಭಿಕ್ಷಾಟನೆಯೇ ಭಿಕ್ಷಾಟನೆ ಮಾಡತಕ್ಕಂತಹ ವಿಧಾನ ಬೇರೆ ಇರಬಹುದು ಅಥವಾ ಭಿಕ್ಷಾಟನೆಗೆ ಒಂದು ವೇಷವಾಗಿರಬಹುದು. ಆದರೆ ಭಿಕ್ಷಾಟನೆಯ ಕಾಯಿದೆಯನ್ನು ತಂದಿರುವಾಗ ಯಾವುದೇ ಭಿಕ್ಷಾಟನೆಯು, ಯಾವುದೇ ಸ್ವರೂಪವಾಗಿರಲಿ, ಅದು ಭಿಕ್ಷಾಟನೆಯಾಗುತ್ತದೆ. ಆ ಕಾಯಿದೆಯಡಿಯಲ್ಲಿ ಅವರನ್ನು ಅರೆಸ್ಟ್ ಮಾಡಿ ಅವರನ್ನು ನಾವು ಸೇರಿಸಬೇಕಾಗುತ್ತದೆ. ಅವರೇನು ಬರೀ ವೇಷ ಹಾಕಿ ಭಿಕ್ಷಕುರಾದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಆದರೆ ಅದಕ್ಕೆ ನಾವು ಬೇರೆ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಇದೆ.

ಅಧ್ಯಕ್ಷರು : ಈಗ ಬೆಲೆಗಳೆಲ್ಲಾ ಜಾಸ್ತಿಯಾಗಿರುವುದರಿಂದ ದಾನ ಕೊಡುವವರು ಮಿನಿಮಮ್ ಇಷ್ಟು ಕೊಡಬೇಕು ಎಂದು ಹೇಳಿ ಏನಾದರೂ ಮಾಡುವುದಕ್ಕೆ ಸಾಧ್ಯವೇ ?

SRI K.M. KRISHNA REDDY : Beggers are not choosers.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು) : 38ನೇ ಪಟ್ಟಿಯಲ್ಲಿರುವ ಒಟ್ಟು 48 ಪ್ರಶ್ನೆಗಳ ಪೈಕಿ ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸಲಾಗಿದೆ.

ಬಳ್ಳಾರಿ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ

2933 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) *ಬಳ್ಳಾರಿ ನಗರಕ್ಕೆ ಕುಡಿಯುವ ನೀರನ್ನು ಕೊಡುವ ಸಲುವಾಗಿ, ಅಲ್ಲಿರುವ ಅಣೆಕಟ್ಟೆಯ ದುರಸ್ಥಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಕ್ಕಾಗಿ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೆ ?*

2) *ಹಾಗಿದ್ದಲ್ಲಿ, ದುರಸ್ಥಿಗಾಗಿ ಅಂದಾಜು ಮಾಡಲಾದ ಅಂದಾಜು ಪಟ್ಟಿಯ ಮೊತ್ತ ?*

3) *ಟೆಂಡರ್‌ಗಳನ್ನು ಕರೆಯಲಾಗಿದೆಯೆ ?*

4) *ಹಾಗೂ 100 ಮೀ. ಉದ್ದದ ಹೊಸ ಕೊಳವೆ ಮಾರ್ಗವನ್ನು ಹಾಕಿ, ನೀರನ್ನು ಮೇಲುಮಟ್ಟದ ಜಲಸಂಗ್ರಹಾಗಾರಕ್ಕೆ ಪಂಪ್ ಮಾಡುವ ಕಾಮಗಾರಿಯನ್ನು ಸಹ, ಸರ್ಕಾರ ಕೈಗೆತ್ತಿಕೊಂಡಿದೆಯೇ ?*

5) *ದುರಸ್ಥಿ ಕಾಮಗಾರಿಯು ಮತ್ತು ಕೊಳವೆ ಮಾರ್ಗವನ್ನು ಹಾಕುವ ಕಾಮಗಾರಿಯು ಯಾವಾಗ ಪೂರ್ಣಗೊಳ್ಳುವುದು ?*

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

1) ಹೌದು.

2) ರೂ. 42.50 ಲಕ್ಷಗಳು.

3) ಕರೆಯಲಾಗಿದ್ದು, ಟೆಂಡರ್ ಅನುಮೋದನೆಗಾಗಿ, ಪರಿಶೀಲನೆಯ ಹಂತದಲ್ಲಿರುತ್ತದೆ.

4) ಹೌದು.

5) ಈಗಾಗಲೇ ಕಾಟನ್‌ಪೇಟೆ ಮಾರ್ಕೆಟ್ ಸರಹದ್ದಿನಲ್ಲಿ ಬರುವ ಮೇಲುಮಟ್ಟದ ಜಲಸಂಗ್ರಹಾಗಾರಕ್ಕೆ ಕೊಳವೆ ಮಾರ್ಗವನ್ನು ಹಾಕುವ ಕಾಮಗಾರಿಯು ಮುಗಿದಿದ್ದು, ಕೊಳವೆ